## ಬೆಂಕಿಕಡ್ಡಿಯಲ್ಲಿ ಅರಳಿದ ಹೂವುಗಳು

ಈ ಚಿತ್ರದಲ್ಲಿ ಕಾಣುವ ಬಿಳಿ ಬಣ್ಣದ ಹೂವು ನೈಜವಾದುದಲ್ಲ. ನೈಲಾನ್ ಬೆಂಕಿ ಕಡ್ಡಿಯಿಂದ ಮಾಡಿದ ಹೂವುಗಳು. ಇವು ಶಿರಸಿ ತಾಲೂಕಿನ ಕಾನುಗೋಡು ಗ್ರಾಮದ ಸಾವಿತ್ರಿ ವೆಂಕಟರಮಣ ಹೆಗಡೆಯವರ ಕೈಚಳಕದಿಂದ ಅರಳಿವೆ.

ಚಿತ್ರ-ಬರಹ: **ವಿ. ಸಿ. ಪಾಟೀಲ, ಸಾಗರ**





## ಹಕ್ಕಿಗಳ ಈಜುಗೊಳ

ಈ ಚಿತ್ರದಲ್ಲಿರುವುದು ಹಕ್ಕಿಗಳ ಈಜುಗೊಳ. ಈ ಅತ್ಯಾಕರ್ಷಕ, ಅಪರೂಪದ ಕೃತಿಯ ಕರ್ತೃ ಕುಮಟಾ ತಾಲ್ಲೂಕಿನ ಮೂರೂರಿನ ಸಿದ್ಧರ ಮಠದ, ಉತ್ಸಾಹಿ ಯುವ ಕಲಾವಿದ ಶಿವಮೂರ್ತಿ ಸತ್ಯನಾರಾಯಣ ಭಟ್ಟ. ಇದಕ್ಕೆ ಭಟ್ಟರು 'ಬರ್ಡ್ ಬಾತ್' ಎಂದು ನಾಮಕರಣ ಮಾಡಿದ್ದಾರೆ! ಬೇಸಿಗೆಯಲ್ಲಿ ವಿವಿಧ ನಮೂನೆಯ, ತರತರದ ಬಣ್ಣಗಳ ಪಕ್ಷಿಗಳು, ಬಿಳಿಕಲ್ಲಿನಿಂದ ರಚಿಸಿದ, ಎಲೆ ಆಕಾರದ ಈ ಸ್ನಾನಗೃಹಕ್ಕೆ ಎಲ್ಲಿಂದಲೋ ಪುರ್ರನೆ ಹಾರಿಬಂದು, ದೂರದಿಂದಲೇ ಮನುಷ್ಯರು ಇಲ್ಲದಿರುವುದನ್ನು ದೃಢೀಕರಿಸಿಕೊಂಡು, ಮುಳುಗಿ ಎದ್ದು ಸ್ನಾನ ಮಾಡುತ್ತವೆ! ನಂತರ ಮೈಕೊಡವಿ, ಪಕ್ಕದಲ್ಲಿರುವ ಆಸನದಲ್ಲಿ ಕುಳಿತು ಮೈ ಒಣಗಿಸಿಕೊಂಡು ಪುನಃ ಹಾರಿ ಬಿಡುತ್ತವೆ.

**-ನಾರಾಯಣ ಯಾಜಿ, ಶಿರಾಲಿ**

## ಹೀಗೊಂದು ಟೋಪಿ

ಸಾಮಾನ್ಯವಾಗಿ ನೀವು ಅಡಿಕೆ ಹಾಳೆಯಿಂದ ಮಾಡಿದ ಹಾಗೂ ಬಟ್ಟೆಯಿಂದ ತಯಾರಿಸಿದ ಟೋಪಿಗಳನ್ನು ನೋಡಿರುತ್ತೀರಾ. ಆದರೆ ಇಲ್ಲೊಂದು ಟೋಪಿಯನ್ನು ಬೆತ್ತದ ಸಿಬಿರಿನಿಂದ ತಯಾರಿಸಲಾಗಿದ್ದು ಮುಂಭಾಗದಲ್ಲಿ ಸೋಲಾರ್ ಅಳವಡಿಸಿದ ಫ್ಯಾನೊಂದನ್ನು ಇಡಲಾಗಿದೆ. ಸೋಲಾರ್ ಪ್ಲೇಟನ್ನು ಟೋಪಿಯ ಮೇಲ್ಭಾಗದಲ್ಲಿ ಅಳವಡಿಸಲಾಗಿದೆ. ಬರುಬಿಸಿಲಿನಲ್ಲಿ ಈ ಟೋಪಿಯನ್ನು ಧರಿಸಿ ತಿರುಗಾಡಿದರೆ ಫ್ಯಾನ್ ತಿರುಗಿ ತಂಪು ಗಾಳಿಯನ್ನು ನಮಗೆ ನೀಡುತ್ತದೆ. ಇದನ್ನು ನೀವು ಶಿವಮೊಗ್ಗ ಜಿಲ್ಲೆಯ ಭಗವತಿ ಕೆರೆಯಲ್ಲಿ ವಾಸವಿರುವ ರೈತ ಮುಖಂಡ ಕಡಿದಾಳು ಶಾಮಣ್ಣನವರ ಮನೆಯಲ್ಲಿ ನೋಡಬಹುದು.

**-ನವೀನ್ ತಿಮ್ಮೇಜಿ, ದಾವಣಗೆರೆ**

ಚಿತ್ರ: **ಕಡಿದಾಳು ಶಾಮಣ್ಣ**

